ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಚಿಕ್ಕಮಗಳೂರು ವಿಭಾಗ:ಚಿಕ್ಕಮಗಳೂರು.

ಸಂ:ಕರಾಸಾ/ಚಿವಿ/ಸಂ/ವಾ/1892 /2016–17 ದಿನಾಂಕ:26–10–2016

ಇ–ಹರಾಜು ಪ್ರಕಟಣೆ ಸಂಖ್ಯೆ–6/2016

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿಕ್ಕಮಗಳೂರು ವಿಭಾಗದ ಆಡಳಿತ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು/ತೆರೆದ ಜಾಗಗಳಿಗೆ ಪರವಾನಿಗೆದಾರರನ್ನು ಇ–ಟೆಂಡರ್ ಪ್ರಕ್ರೀಯೆಯ ಮೂಲಕ ಆಯ್ಕೆಮಾಡಲು ಅಸಕ್ತ ವಾಣಿಜ್ಯ ಉದ್ಯಮಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ನಿಲ್ದಾಣದ ಹೆಸರು	ವಾಣಿಜ್ಯ ಮಳಿಗೆ/ತೆರೆದ ಜಾಗದ ವಿವರ ಹಾಗೂ ತೆರವುಗೊಳ್ಳುವ ದಿನಾಂಕ	ಪರವಾನಿಗೆ ಅವಧಿ	ನಿಗದಿ ಪಡಿಸಿದ ಮಾಸಿಕ ಪರವಾನಿಗೆ ಶುಲ್ಕ	ಹರಾಜಿಗೆ ನಿಗದಿ ಪಡಿಸಿರುವ ಸಮಯದ	ಇ.ಎಂ.ಡಿ.	ವಿಸ್ತೀರ್ಣ ಚ.ಅಡಿಗಳಲ್ಲಿ
1	ಚಿಕ್ಕಮಗಳೂರು	ಜನರಲ್ ಸ್ಟಾಲ್–2	5ವರ್ಷ	62,211/–	10.00 ರಿಂದ 10.10	1,86,633/–	10x10'1
2	ಅರಸೀಕೆರೆ	ಜನರಲ್ ಸ್ಟಾಲ್–4 (ಅಂಗವಿಕಲರಿಗೆ ಮೀಸಲು)	5ವರ್ಷ	16,700/–	10.10 ರಿಂದ 10.20	50,100/–	10x10
3	ಅರಸೀಕೆರೆ	ಜನರಲ್ ಸ್ಟಾಲ್–1 (ತೆರೆದ ಜಾಗ)	3ವರ್ಷ	10,155/–	10.20 ರಿಂದ 10.30	30,465/–	10x10
4	ಜಾವಗಲ್	ಜನರಲ್ ಸ್ಟಾಲ್–2(ತೆರವು ದಿ:01.02.17)	5ವರ್ಷ	4,393/–	10.30 ರಿಂದ 10.40	13,180/–	10'8 x11'6
5	ಬಾಣಾವರ	ಜನರಲ್ ಸ್ಟಾಲ್–7(ಪರಿಶಿಷ್ಟ ಜಾತಿಗೆ ಮೀಸಲು)	5ವರ್ಷ	14,260/–	10.40 ರಿಂದ 10.50	42,780/–	9'10 x9'10
6	ಸಕಲೇಶಪುರ	ಜನರಲ್ ಸ್ಟಾಲ್–6 (ಮೊ.ಮಹಡಿ)	5ವರ್ಷ	––	11.50 ರಿಂದ 12.00	18,750/–	41'3x29
7	ಕಡೂರು	ಜನರಲ್ ಸ್ಟಾಲ್–10 (ಪ್ಲಾಟ್ ಫಾರಂ)	5 ವರ್ಷ	––	12.00 ರಿಂದ 12.10	10,553/–	12x12'8
8	ಕಡೂರು	ಜನರಲ್ ಸ್ಟಾಲ್–2(ರೈಲ್ವೆ ನಿಲ್ದಾಣ ಕಡೆ) "ತೆರವು ದಿನಾಂಕ:01.02.2017"	5 ವರ್ಷ	5,946/–	12.10 ರಿಂದ 12.20	17,840/–	11 x10'8
9	ಕಡೂರು	ಜನರಲ್ ಸ್ಟಾಲ್–10(ರೈಲ್ವೆ ನಿಲ್ದಾಣ ಕಡೆ)	5 ವರ್ಷ	––	12.20 ರಿಂದ 12.30	88,898/–	11x10'8

10	ಬೀರೂರು	ಜನರಲ್ ಸ್ಟಾಲ್–2 "ತೆರವು ದಿನಾಂಕ:09.02.2017"	5 ವರ್ಷ	1,464/–	12.30 ರಿಂದ 12.40	4,400/–	8'1 x5'7
11	ಸಖರಾಯಪಟ್ಟಣ	ಜನರಲ್ ಸ್ಟಾಲ್–3	5 ವರ್ಷ	––	12.40 ರಿಂದ 12.50	10,588/–	12 x10
12	ಸಖರಾಯಪಟ್ಟಣ	ಜನರಲ್ ಸ್ಟಾಲ್–2	5ವರ್ಷ	––	12.50 ರಿಂದ 13.00	11,300/–	12 x10
13	ಸಖರಾಯಪಟ್ಟಣ	ಜನರಲ್ ಸ್ಟಾಲ್–4	5ವರ್ಷ	––	13.00 ರಿಂದ 13.10	14,050/–	12 x10

ಹರಾಜುದಾರರು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿರುವ ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ:21–11–2016ರಂದು 15.00 ಗಂಟೆಯೊಳಗೆ ಅರ್ಜಿ ಸಲ್ಲಿಸುವುದು, ದಿನಾಂಕ:23–11–2016ರಂದು 15.01 ಗಂಟೆಗೆ ಅಡಕಗೊಳಿಸಿರುವ ದಾಖಲಾತಿ ಪರಿಶೀಲನೆ ಹಾಗೂ ಸದರಿ ಇ–ಪ್ರಕ್ಯೂರ್ ಮೆಂಟ್‌ನಲ್ಲಿನ ನಿಭಂದನೆಗಳ ಪ್ರಕಾರ ದಿನಾಂಕ:24–11–2016 ರಂದು 10.00 ಗಂಟೆಯಿಂದ ಮೇಲೆ ನಮೂದಿಸಿರುವ ಸಮಯದಲ್ಲಿ ಹರಾಜಿನಲ್ಲಿ ಭಾಗವಹಿಸುವುದು ನಂತರ 15.01 ಗಂಟೆಯ ನಂತರ ಹರಾಜು ತೆರೆಯಲಾಗುವುದು.

(ತೆರೆದ ಜಾಗಗಳ ಚಕ್ ಬಂಧಿ ಹಾಗೂ ಹೆಚ್ಚಿನ ವಿವರವನ್ನು ವಿಭಾಗೀಯ ಕಛೇರಿ, ಸಂಚಾರ ಶಾಖೆಯಲ್ಲಿ ಹಾಗೂ www.eproc.karnataka.gov.in **ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳುವುದು**.)

Last date for submitting application: As per e-procurement portal.
Online auction on: As per e-procurement portal.
Tender will be opened on: As per e-procurement portal.

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ:ಚಿಕ್ಕಮಗಳೂರು.

ನಿಬಂಧನೆಗಳು:–

1. The tenderer shall pay processing fee and EMD through e-procurement following four modes of payment:
   a)Debit Card, b)Credit Card, c)OTC (Over the counter) and NEFT (National Electronic fund transfer)
2. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10%ರಷ್ಟು ಹೆಚ್ಚಾಗುವುದು.
3. ಟೆಂಡರ್ ಪ್ರಕಟಣೆಗೊಳಿಸಿರುವ ದಿನಾಂಕದ ಅವಧಿಯಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತಕ್ಕೆ ಮಾತ್ರ ಡಿ.ಡಿ.ಯನ್ನು ಪರಿಗಣಿಸಲಾಗುವುದು.
4. ವಾಣಿಜ್ಯ ಮಳಿಗೆಗಳು ಯಾವ ಯಾವ ಸ್ಥಿತಿಯಲ್ಲಿವೆಯೋ ಹಾಗೇಯೇ ನೀಡಲಾಗುವುದು.
5. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು. ಹಾಗೂ ಬಂಧ್ ಅವಧಿಯಲ್ಲಿ ಪರವಾನಿಗೆ ಶುಲ್ಕವನ್ನು ಕಡಿತಗೊಳಿಸಲಾಗುವುದಿಲ್ಲ.
6. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇದಿಸಲಾಗಿರುತ್ತದೆ.

7. ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಷೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ) ನಿಯಮಗಳು, 2012ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಲಾಗಿದೆ.
8. ಮಳಿಗೆಗಳಲ್ಲಿ ಟೂರಿಸ್ಟ್ ಟ್ರಾವಲ್, ಮಧ್ಯಪಾನ, ಮಾಂಸ ಮತ್ತು ಇತರೆ ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ, ಮಾದಕ ವಸ್ತುಗಳು, ವಾಯು ಮಾಲಿನ್ಯ ಉಂಟುಮಾಡುವ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆಯಾಗುವಂತಹ ವ್ಯಾಪಾರಗಳನ್ನು ಹೊರತು ಪಡಿಸಿದೆ.
9. ಡಾರ್ಮಿಟರಿ ಮತ್ತು ಲಾಡ್ಜಿಂಗ್ ವ್ಯವಹಾರ ನಡೆಸಲು ಆಯ್ಕೆಯಾಗುವ ಪರವಾನಿಗೆದಾರರೇ ಮೂಲ ಭೂತ ಸೌಕರ್ಯಗಳನ್ನು ನಿರ್ಮಿಸಿಕೊಳ್ಳಬಹುದಾಗಿರುತ್ತದೆ.
10. ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಸಿಗರೇಟು/ಗುಟ್ಕಾ ಮತ್ತು ಇನ್ನಿತರೆ ತಂಬಾಕು ಪದಾರ್ಥಗಳ ಮಾರಾಟವನ್ನು ಕಡ್ಡಾಯವಾಗಿ ನಿಷೇದಿಸಿದೆ.
11. ಉಪಹಾರ ಗೃಹದಲ್ಲಿ ಹೊಟ್ಟಾಗಲಿ, ಸೌದೆಯ ಒಲೆಯನ್ನು ಉರಿಸುವಂತಿರುವುದಿಲ್ಲ, ಗ್ಯಾಸ್ ಮತ್ತು ವಿದ್ಯುತ್‌ನ್ನು ಮಾತ್ರ ಬಳಸುವುದು.
12. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ ಹಾಗೂ ಉಪಹಾರ ಗೃಹವನ್ನು ಹೊರತು ಪಡಿಸಿ, ಉಳಿದ ವಾಣಿಜ್ಯ ಮಳಿಗೆಗಳಲ್ಲಿ ಗ್ಯಾಸ್‌ನ್ನಾಗಲಿ, ಹೊಟ್ಟಾಗಲಿ ಅಥವಾ ವಿದ್ಯುತ್‌ನ್ನು ಬಳಸಿ ಒಲೆಯನ್ನು ಉರಿಸುವಂತಿರುವುದಿಲ್ಲ ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
13. ಕರ್ನಾಟಕ ರಾಜ್ಯ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ–6/23(1)ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ವ್ಯಾಪಾರ ಮಾಡುವ ಸಾಮಾಗ್ರಿಗಳ ಪೊಟ್ಟಣದ ಮೇಲೆ ಮುದ್ರಿಸಿರುವ ಗರಿಷ್ಟ ಚಿಲ್ಲರೆ ಬೆಲೆಗಿಂತ ಹೆಚ್ಚಿಗೆ ಬೆಲೆ ಪಡೆಯುವುದಾಗಲಿ ಅಥವಾ ಬೆಲೆಯನ್ನು ಅಳಿಸುವುದು/ತಿದ್ದುವುದು/ಇತ್ಯಾದಿಗಳನ್ನು ಮಾಡಿದ ಬಗ್ಗೆ ದೂರುಗಳು ಬಂದಲ್ಲಿ ನೀಡಲಾದ ಪರವಾನಿಗೆಯನ್ನು ರದ್ದು ಪಡಿಸಲಾಗುವುದು
14. ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷೆನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.
15. ಆಯ್ಕೆ ಆದ ಪರವಾನಿಗೆದಾರರು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವ ಇಎಂಡಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಿಗೆ ಶುಲ್ಕದ ಆರು (6) ಪಟ್ಟು ಹಣವನ್ನು ಭದ್ರತಾ ಠೇವಣಿಯನ್ನು ಡಿ.ಡಿ. ರೂಪದಲ್ಲಿ **"ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಚಿಕ್ಕಮಗಳೂರು ವಿಭಾಗ "** ಇವರ ಹೆಸರಿನಲ್ಲಿ ಪಾವತಿಸುವುದು ಹಾಗೂ ಮೂರು ತಿಂಗಳ ಹೆಚ್ಚುವರಿ ಭದ್ರತಾ ಠೇವಣಿ ಹಣವನ್ನು ಎರಡನೇ ವರ್ಷದಿಂದ ಮೂರನೇ ವರ್ಷದ ಪರವಾನಿಗೆ ಅವಧಿ ಮುಕ್ತಾಯಕ್ಕಿಂತ ಮುಂಚಿತವಾಗಿ ಪಾವತಿಸುವುದು.
16. ಆಯ್ಕೆಗೊಂಡ ಪರವಾನಿಗೆದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಭಾರತ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರ ವಿಧಿಸುವ ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು
17. ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.
18. ಅಯ್ಕೆಗೊಂಡ ಪರವಾನಿಗೆದಾರರು ಮಳಿಗೆ/ ದೂರವಾಣಿ ಭೂತ್‌ನ್ನು ಸ್ವತ: ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.

19. ಆಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.
20. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕ, ಸೇವಾ ತೆರಿಗೆ ಶುಲ್ಕ, ನೀರಿನ ಶುಲ್ಕ, ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು 7ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.
21. ಸಂಧಾನದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ಸಂಸ್ಥೆಯು ಕಾಲಕಾಲಕ್ಕೆ ವಿಧಿಸುವ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.
22. ದೂರವಾಣಿ ಭೂತ್ ಅಂಗವಿಕಲರಿಗೆ ಮಾತ್ರ ಮೀಸಲಿರಿಸಿದೆ.
23. ಕಾಮಗಾರಿಗಾಗಿ ಮಳಿಗೆ ಅವಶ್ಯಕತೆ ಇದ್ದಾಗ ನಿಗಮದವತಿಯಿಂದ 1 ತಿಂಗಳು ಮುಂಚಿತವಾಗಿ ನೋಟಿಸ್ ನೀಡಿ ತೆರವುಗೊಳಿಸಲಾಗುವುದು.
24. ಇ–ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ & ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದುರಿಸಿಕೊಂಡಿದೆ.
25. ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳದಲ್ಲಿ ಕನಿಷ್ಟ ಎರಡು ದ್ವಿಚಕ್ರ/ತ್ರಿಚಕ್ರ/ಕಾರುನ್ನು ಪಾರ್ಕಿಂಗ್ ಸ್ಥಳದಲ್ಲಿ ಶೇ.2%ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ನೀಡಬೇಕಾಗಿರುತ್ತದೆ.
26. ಕಡ್ಡಾಯವಾಗಿ ಪಾನ್‌ಕಾರ್ಡ್ ಹೊಂದಿರಬೇಕಾಗಿರುತ್ತದೆ.
27. ನಿಗದಿತ ಜಾಗಕ್ಕಿಂತ ಹೆಚ್ಚುವರಿ ಜಾಗ ಉಪಯೋಗಿಸಿಕೊಳ್ಳುತ್ತಿರುವುದು ಕಂಡುಬಂದಲ್ಲಿ ಹಾಲಿ ಪಾವತಿಸುತ್ತಿರುವ ಮಾಸಿಕ ಪರವಾನಿಗೆ ಶುಲ್ಕದ 3 ಪಟ್ಟು ಅಂದರೆ ಪ್ರೊರೆಟಾ ಮಾದರಿಯಲ್ಲಿ ದಂಡವನ್ನು ಪಾವತಿಸಿಕೊಂಡು ಹೆಚ್ಚುವರಿ ಸ್ಥಳವನ್ನು ತೆರವುಗೊಳಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಅಥವಾ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.
28. ಬ್ಯಾಂಕ್ ಎಟಿಎಂ. ಕೌಂಟರ್‌ಗಳಿಗೆ ಆಯ್ಕೆಯಾದ 7 ದಿನದೊಳಗಾಗಿ ಭದ್ರತಾ ಠೇವಣಿ, ಮುಂಗಡ ಪರವಾನಿಗೆ ಶುಲ್ಕ, ಸೇವಾ ತೆರಿಗೆ ಶುಲ್ಕ ಪಾವತಿಸಿ, ಕರ್ನಾಟಕ ಸ್ಟಾಂಪ್ ಆಕ್ಟ್‌ನಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿರುತ್ತದೆ.
29. ಬ್ಯಾಂಕ್ ಎಟಿಎಂ. ಕೌಂಟರ್‌ಗಳಿಗೆ ಕರಾರು ಒಪ್ಪಂದವನ್ನು ಮಾಡಿಕೊಂಡ 40 ದಿನಗಳವರೆಗೆ ಉಚಣಚಿಣುಠಟಿ ಅವಧಿ ನೀಡಲಾಗುವುದು ನಂತರದ ದಿನದಿಂದ ಬಾಡಿಗೆ ಪ್ರಾರಂಭಗೊಳ್ಳುತ್ತದೆ.
30. ಎಟಿಎಂ ಕೌಂಟರ್‌ಗೆ ಗಿಖಂಖಿ ಅಳವಡಿಸಲು 10*10 ಚದರ ಅಡಿ ಜಾಗವನ್ನು ಮೇಲ್ಚಾವಣಿಯ ಮೇಲೆ ನೀಡಲಾಗುವುದು.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ.
ಕರಾರಸಾನಿಗಮ:ಚಿಕ್ಕಮಗಳೂರು ವಿಭಾಗ.